# ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ದೊಡ್ಡಹಟ್ಟಿಹುಂಡಿ

## ಸುಸಜ್ಜಿತ ನಲಿಕಲಿ ಕೊಠಡಿ – ಒಂದು ವರದಿ



ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ದೊಡ್ಡಹಟ್ಟಿಹುಂಡಿ ಇಲ್ಲಿಗೆ 2004 ರಲ್ಲಿ ನಾನು ಸಹ ಶಿಕ್ಷಕಿಯಾಗಿ ವರ್ಗಾವಣೆಯಾಗಿ ಬಂದೆ. ಆಗ ಈ ಶಾಲೆಯಲ್ಲಿ ಎರಡು ಕೊಠಡಿಗಳಿದ್ದವು. ಒಂದು ಶಿಥಿಲವಾಗುತ್ತಿತ್ತು. ಸ ಶಿ ಅ ವತಿಯಿಂದ ಕೊಠಡಿ ನಿರ್ಮಾಣಕ್ಕೆ ಹಣ ಬಿಡುಗಡೆಯಾದ ನಂತರ ಶಿಥಿಲವಾಗುತ್ತಿದ್ದ ಕೊಠಡಿಯನ್ನು ಕೆಡವಿ ಎರಡು ಸುಂದರ ಕೊಠಡಿಗಳನ್ನು ನಿರ್ಮಿಸಲಾಯಿತು. ಈಗ ನಮ್ಮ ಶಾಲೆಯಲ್ಲಿ ಮೂರು ಕೊಠಡಿಗಳಿದ್ದು 120 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಮೂರು ಕೊಠಡಿಗಳಲ್ಲಿ ಒಂದು ಕೊಠಡಿಯು ಬಹಳ ತಗ್ಗಿನ ಪ್ರದೇಶದಲ್ಲಿದೆ. ಮಳೆ ಬಂದರೆ ನೀರು ಕೆರೆಯಂತೆ ನಿಂತು ತರಗತಿ ಒಳಗೆ ನುಗ್ಗುತ್ತದೆ. ಈ ಕೊಠಡಿಯ ಮುಂದೆ ಪುಟ್ಟ ಮೈದಾನವಿರುವುದರಿಂದ ಮಕ್ಕಳಿಗೆ ಆಟವಾಡಲು ಸುಲಭವಾಗುವುದೆಂದು ನಲಿ–ಕಲಿಗೆ ಈ ಕೊಠಡಿಯನ್ನೇ ಆಯ್ಕೆ ಮಾಡಿರುತ್ತೇನೆ. ಕಳೆದ ವರ್ಷ ಮಳೆ ಬಂದು ಮಕ್ಕಳ ಪುಸ್ತಕಗಳು ನೆನೆದು ಬಹಳ ತೊಂದರೆಯಾಗಿತ್ತು. ಮಕ್ಕಳು ಬಗ್ಗಿ ಬರೆಯುವುದನ್ನು ನೋಡಿ ಅವರ ಬೆನ್ನಿನ ಬಗ್ಗೆ ಯೋಚನೆಯಾಗಿತ್ತು. 2009–10 ನೇ ಸಾಲಿನಲ್ಲಿ ನಲಿ–ಕಲಿ ಯೋಜನೆಯು ರಾಜ್ಯಾದ್ಯಂತ ವಿಸ್ತರಿಸಿದಾಗ ಇದರಲ್ಲಿ ಏನಾದರೂ ಹೊಸತು ಮಾಡಬೇಕೆಂಬ ಯೋಚನೆ ಬಂದಿತು. ನಮ್ಮ ಸಿ ಆರ್ ಪಿ ಯವರಾದ ಶ್ರೀ ಶಿವಪ್ಪನವರು ರೂ. 501.00 ನೀಡಿ ಒಂದು ರೌಂಡ್ ಟೇಬಲ್ ಮಾಡಿಸಿ ಎಂದು ಸಲಹೆ ನೀಡಿ ಪ್ರೋತ್ಸಾಹಿಸಿದರು. ಅಷ್ಟು ಹೊತ್ತಿಗಾಗಲೇ ಶಾಲೆಗೆ ಊಟದ ತಟ್ಟೆಗಳು, ಜಮಖಾನಗಳು, ಕುಕ್ಕರ್, ರ್‍ಯಾಕ್ಸ್, ಟಿ ವಿ, ಡಿ ವಿ ಡಿ ಇತ್ಯಾದಿ ವಸ್ತುಗಳನ್ನು ದಾನಿಗಳಿಂದ ಸಂಗ್ರಹಿಸಿದ್ದೆವು. ಆದ್ದರಿಂದ ಈ ಜವಾಬ್ದಾರಿಯನ್ನು ನನಗೆ ನೀಡಲಾಯಿತು. ಇದನ್ನು ಸಾಕಾರಗೊಳಿಸಲು ಸಾಕಷ್ಟು ಹಣ ಬೇಕಾಗಿತ್ತು. ಒಂದು ರೌಂಡ್ ಟೇಬಲ್ ಎಂದು ಯೋಚಿಸಿದ್ದು ನಲಿ–ಕಲಿ ಯೋಜನೆಗೆ ಸರಿಹೊಂದುವುದಿಲ್ಲವೆಂದು ಭಾವಿಸಿ ನನ್ನದೇ ಆದ ರೀತಿಯಲ್ಲಿ ಒಂದು ಯೋಜನೆ ಸಿದ್ಧಪಡಿಸಿದೆ. ಇದರಲ್ಲಿ ಐದು ಗುಂಪುಗಳ ತಟ್ಟೆಗಳಿಗೆ ಐದು ರೌಂಡ್ ಟೇಬಲ್‌ಗಳನ್ನು ಮಳೆ ಬಂದರೂ ಹಾಳಾಗದಂತೆ ಕಬ್ಬಿಣದಿಂದ ನಿರ್ಮಿಸಲಾಗಿದೆ. ಪ್ರತಿ ಹಂತದಲ್ಲೂ ಕಾರ್ಡ್ ಗಳನ್ನು ತೆಗೆದು ಬಳಸುವುದು, ಎತ್ತಿಡುವುದು ಬಹಳ ಕಷ್ಟವಾಗುತ್ತಿತ್ತು. ಅದಕ್ಕಾಗಿ ಕಾರ್ಡ್ ರ್‍ಯಾಕ್ಸ್ ಮಾಡಿಸಲು ಯೋಚಿಸಿದೆ. ಮಕ್ಕಳ ಪುಸ್ತಕಗಳು ಮಳೆಯಲ್ಲಿ ನೆನೆಯುವುದನ್ನು ತಪ್ಪಿಸಲು ಗೋಡೆಗೆ ಬುಕ್ಸ್ ರ್‍ಯಾಕ್ಸ್ ಮಾಡಿಸುವ ಕಲ್ಪನೆ ಮೂಡಿತು. ಹಾಗೆಯೇ ಪ್ರತಿ ವಿಷಯಕ್ಕೆ ತಕ್ಕಂತೆ ಪಾಠೋಪಕರಣಗಳನ್ನು ವ್ಯವಸ್ಥಿತ ರೀತಿಯಲ್ಲಿ ಜೋಡಿಸಲು ಮೂಲೆಯಲ್ಲಿ ರ್‍ಯಾಕ್ಸ್ ಮಾಡಿಸುವುದೆಂದು ಯೋಚಿಸಿದೆ. ಈ ಎಲ್ಲಾ ವ್ಯವಸ್ಥೆ ಮಳೆಯಿಂದ ರಕ್ಷಿಸಿಕೊಳ್ಳುವುದಕ್ಕಾಗಿತ್ತು. ಅದರ ಜೊತೆಗೇ ನಲಿ–ಕಲಿಗಾಗಿ ಒಂದು ಸುಸಜ್ಜಿತ ಕೊಠಡಿಯ ರೂಪುರೇಷೆಯೂ ತಯಾರಾಗಿತ್ತು. ಇದಕ್ಕಾಗಿ ಸುಮಾರು ರೂ. 50,000.00 ಗಳನ್ನು ಸಂಗ್ರಹಿಸಬೇಕಾಗಿತ್ತು. ಈ ಯೋಜನೆಯನ್ನು ನನ್ನ ತಂಗಿ ಶ್ರೀಮತಿ ಪ್ರಪುಲ್ಲ(ಇಂಟೀರಿಯರ್ ಡೆಕೋರೇಟರ್)ಳ ಬಳಿ ವಿವರಿಸಿದಾಗ ಅವಳು ಅದನ್ನು ಕಾರ್ಯರೂಪಕ್ಕೆ ತರಲು ಪೂರ್ಣ ಜವಾಬ್ದಾರಿ ತೆಗೆದುಕೊಂಡಳು. ಹಣ ಸಂಗ್ರಹಣೆಯ ಬಗ್ಗೆ ಎಸ್ ಡಿ ಎಂ ಸಿ ಯವರೊಂದಿಗೆ ಮಾತು ಕತೆ ನಡೆಸಿದಾಗ ಎಲ್ಲರೂ ಸಂಪೂರ್ಣ ಬೆಂಬಲ ನೀಡಿ ಪೋಷಕರಿಂದ ದಾನರೂಪದಲ್ಲಿ ಅಗತ್ಯ ಹಣ ಸಂಗ್ರಹಿಸಲು ಅನುಮತಿ ನೀಡಿದರು ಹಾಗೂ ಗ್ರಾಮಸ್ಥರು ತಮ್ಮ ಸಹಾಯ ಹಸ್ತ ಚಾಚಿದರು. ನಂತರ ನನ್ನ ಕುಟುಂಬದವರನ್ನು ಕೇಳಿದಾಗ ಎಲ್ಲರೂ ಸಂತೋಷದಿಂದ ಸುಮಾರು ರೂ. 35.000.00 ಗಳಷ್ಟು ಹಣ ನೀಡಿದರು. ಎಲ್ಲಾ ಒಟ್ಟು ರೂ. 45,000.00 ಗಳ ಸಂಗ್ರಹವಾಯಿತು. ಎಲ್ಲ ಶಿಕ್ಷಕರ ಸಹಕಾರದೊಂದಿಗೆ ಮುಖ್ಯ ಶಿಕ್ಷಕರ ಮಾರ್ಗದರ್ಶನದಲ್ಲಿ ಈ ಎಲ್ಲ ಕಾರ್ಯಗಳೂ ಪೂರ್ಣಗೊಂಡು ಒಂದು ಸುಸಜ್ಜಿತ ನಲಿ–ಕಲಿ ಕೊಠಡಿ ನಮ್ಮ ಶಾಲೆಯಲ್ಲಿ ತಲೆ ಎತ್ತಿ ನಿಂತಿದೆ. ಇದಕ್ಕಾಗಿ ನಮ್ಮ ಅಧಿಕಾರಿ ವರ್ಗದವರು ಪ್ರೋತ್ಸಾಹ ನೀಡಿ ದಾನವನ್ನೂ ನೀಡಿದ್ದಾರೆ. ಎಲ್ಲರ ಪ್ರೋತ್ಸಾಹದಿಂದ ಈ ಕಾರ್ಯವು ಪೂರ್ಣಗೊಂಡು ಎಲ್ಲರ ಪ್ರಶಂಸೆಗೆ ಒಳಗಾಗಿದೆ. ಮಕ್ಕಳು ಹೆಮ್ಮೆಯಿಮ್ದ ಹಾಗೂ ಸಂತೋಷದಿಂದ ಕಲಿಯುತ್ತಿದ್ದಾರೆ. ಈ ವರ್ಷ ಮಕ್ಕಳಿಗೆ ಫೈಲ್ಸ್ ನೀಡಿದ್ದೇನೆ. ಮಕ್ಕಳು ಬರೆದು ಹಾಳೆಗಳನ್ನು ಈ ಫೈಲ್‌ಗಳಲ್ಲಿ ಸಂಗ್ರಹಿಸಿಡುತ್ತಾರೆ. ಮಕ್ಕಳ ಕಲಿಕೆ ಉತ್ತಮ ರೀತಿಯಲ್ಲಿ ನಡೆಯುತ್ತಿದೆ.

ಇಷ್ಟೆಲ್ಲಾ ಪ್ರೋತ್ಸಾಹಿಸಿ ಸಹಾಯ ನೀಡಿದ ಎಲ್ಲರಿಗೂ ನಾನು ಚಿರಋಣಿ. ಪೂಜ್ಯ ತಂದೆತಾಯಿಯರ ಆಶೀರ್ವಾದದಿಂದ ಈ ಎಲ್ಲ ಸಾಧನೆ ಮಾಡಲು ಸಾಧ್ಯವಾಯಿತು.

ನನ್ನ ಹೆಸರು: ಎಲ್ ನರಸು ರಾಮಚಂದ್ರ
ಮುಖ್ಯ ಶಿಕ್ಷಕರು: ಶ್ರೀಮತಿ ಗಾಯತ್ರಿದೇವಮ್ಮ
ನನ್ನ ಸಹೋದ್ಯೋಗಿಗಳು: ಶ್ರೀಮತಿ ಪುಸ್ಪಾವತಿ ವಿ.
ಶ್ರೀ ಶಿವರಾಜು ಸಿ. ಡಿ.
ನಲಿ-ಕಲಿಯಲ್ಲಿ ಕಲಿಯುತ್ತಿರುವ ಮಕ್ಕಳು : 40 (ಒಂದು ಹಾಗೂ ಎರಡನೆಯ ತರಗತಿಗಳನ್ನು ಸೇರಿಸಿ)







ಮಕ್ಕಳ ಪೋರ್ಟ್ ಪೋಲಿಯೋಗಳನ್ನು ಹಾಗೂ ನಲಿಕಲಿ ಕಾರ್ಡ್‌ಗಳನ್ನು ಇಡುವ ರ್‍ಯಾಕ್ಸ್







ಐದು ಗುಂಪುಗಳಿಗೆ ಐದು ಟೇಬಲ್‌ಗಳು. ತಟ್ಟೆಗಳನ್ನು ಅವುಗಳಲ್ಲೇ ವಿನ್ಯಾಸಗೊಳಿಸಲಾಗಿದೆ.

---

**ಟಿಪ್ಪಣಿ**

ಇದೊಂದು ಪುಟ್ಟ ಕ್ರಿಯಾಸಂಶೋಧನೆ ಎನ್ನಲಡ್ಡಿಯಿಲ್ಲ. ತಮಗೆದುರಾದ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ನಿಟ್ಟನಲ್ಲಿ ಕಾರ್ಯಪ್ರವೃತ್ತರಾದ ಶಿಕ್ಷಕಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡದ್ದಲ್ಲದೆ ಒಟ್ಟಾರೆಯಾಗಿ ಕಲಿಕೆಯ ಪ್ರಕ್ರಿಯೆಗೇ ಒಂದು ಹೊಸತನವನ್ನು ತಂದುಕೊಟ್ಟ ಯಶೋಗಾಥೆ. ಈ ವರದಿ ಅತ್ಯಂತ ವೈಯಕ್ತಿಕವೂ ಅದರೆ ಅಷ್ಟೇ ಸ್ವಾವಲೋಕನವುಳ್ಳದ್ದೂ ಆಗಿದೆ ಎನ್ನುವುದು ಗಮನಿಸಬೇಕಾದ ಅಂಶ. ತಮ್ಮ ಜೊತೆಗಿರುವ ಎಲ್ಲರ ಸಹಕಾರವನ್ನು ನೆನೆಯುವ ಶಿಕ್ಷಕಿ ತನ್ನ ಮನೆಮಂದಿಯನ್ನೂ ಮರೆಯುವುದಿಲ್ಲ. ತೊಡಗಿಸಿಕೊಳ್ಳುವಿಕೆ ಶಾಲೆಗೆ ಬೇರೆ, ಮನೆಗೆ ಬೇರೆಯಲ್ಲ. ತಾನು ಮಾತ್ರವಲ್ಲದೆ ತನ್ನ ಸಹೋದ್ಯೋಗಿಗಳು, ಸ್ನೇಹಿತರು, ಪೋಷಕರು, ಗ್ರಾಮಸ್ಥರು ಹಾಗೂ ಬಂಧುಗಳನ್ನೂ ತೊಡಗಿಸಿಕೊಂಡು ಯೋಚಿಸಲಾರಂಭಿಸಿದಾಗ ಮಾತ್ರ ಸಮುದಾಯದ ಪಾಲ್ಗೊಳ್ಳುವಿಕೆ ಸಮಗ್ರವಾಗುತ್ತದೆ ಹಾಗೂ ಅರ್ಥಪೂರ್ಣವಾಗುತ್ತದೆ. – ಡಾ. ಕುಮಾರ ಸ್ವಾಮಿ ಎಚ್, ಡಯಟ್, ಮೈಸೂರು

---